# ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಕರ್ನಾಟಕ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041.

RAJIV GANDHI UNIVERSITY OF HEALTH SCIENCE, KARNATAKA

4TH 'T' Block, Jayanagar, Bangalore – 560 041.


ರಾಗಾಆವಿವಿ/ಪ್ರವೇಶಾತಿ(ನರ್ಸಿಂಗ್)/ಸುತ್ತೋಲೆ/11/2018-19 ದಿನಾಂಕ:08.04.2019

## ಅಂತಿಮ ಸೂಚನೆ

ಗೆ

**ಪ್ರಾಂಶುಪಾಲರುಗಳು**

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿರುವ

ನರ್ಸಿಂಗ್ ಕಾಲೇಜುಗಳು

**ಮಾನ್ಯರೆ,**

**ವಿಷಯ:** 2018-19ನೇ ಸಾಲಿನ ಮೊದಲನೇ ವರ್ಷದ ಬಿ.ಎಸ್ಸಿ/ ಪಿ.ಬಿ.ಬಿ.ಎಸ್ಸಿ/ಎಮ್.ಎಸ್ಸಿ (ನರ್ಸಿಂಗ್) ಕೋರ್ಸಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳನ್ನು ಪ್ರವೇಶ ಅನುಮೋದನೆ ಮಾಡುವ ಬಗ್ಗೆ ಮತ್ತು ಕೆಲವು ನ್ಯೂನ್ಯತೆಗಳನ್ನ ಸರಿಪಡಿಸುವ ಬಗ್ಗೆ.

**ಉಲ್ಲೇಖ** **ಮಾನ್ಯ ಉಪ ಕುಲಪತಿಯವರ ಆದೇಶದ ದಿನಂಕ:03.04.2019**

* * * * *

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2018-19ನೇ ಸಾಲಿನ ಮೊದಲನೇ ವರ್ಷದ ಬಿ.ಎಸ್ಸಿ/ ಪಿ.ಬಿ.ಬಿ.ಎಸ್ಸಿ/ಎಮ್.ಎಸ್ಸಿ (ನರ್ಸಿಂಗ್) ಕೋರ್ಸಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳನ್ನು ಪ್ರವೇಶ ಅನುಮೋದನೆ ಮಾಡುವ ಸಂಬಂಧ ತಾವುಗಳು ಸಲ್ಲಿಸಿರುವ ಮೂಲ ದಾಖಲಾತಿಗಳು ಮತ್ತು ಪ್ರವೇಶಾತಿ ಶುಲ್ಕವನ್ನು ನಿಯಮಾನುಸಾರ ಪರೀಶಿಲಿಸಿದಾಗ ಕಂಡುಬಂದ ಕೆಲವು ನ್ಯೂನ್ಯತೆಗಳನ್ನು ನಿಗದಿತ ದಿನಾಂಕದಲ್ಲಿ ಸರಿಪಡಿಸಲು ಸಂಬಂದಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಪತ್ರದ ಮುಖೇನ ತಿಳಿಸಿದ್ದರು ಸಹ ಇದುವರೆಗೂ ಕೆಲವೊಂದು ಕಾಲೇಜುಗಳ ಪ್ರಾಂಶುಪಾಲರುಗಳು ಸದರಿ ನ್ಯೂನ್ಯತೆಗಳನ್ನು ಸರಿಪಡಿಸದೇ ಇರುವುದು ಕಂಡುಬಂದಿರುತ್ತದೆ.

ಮಾನ್ಯ ಉಪ ಕುಲಪತಿಯವರ ಆದೇಶದ ಮೇರೆಗೆ ಈ ಪತ್ರ ತಲುಪಿದ 03 ದಿನಗಳ ಒಳಗೆ ಸದರಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ನ್ಯೂನ್ಯತೆಗಳನ್ನು ಸರಿಪಡಿಸಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಸದರಿ ನ್ಯೂನ್ಯತೆಗಳನ್ನ ಸರಿಪಡಿಸದೇ ಇರುವ ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಬಿಡುಗಡೆ ಮಾಡಿ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಲು ಆದೇಶಿಸಲಾಗಿದೆ. ಈ ಸಂಬಂಧ ಯಾವುದೇ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾದರೆ ಸದರಿ ಕಾಲೇಜುಗಳ ಪ್ರಾಂಶುಪಾಲರುಗಳೇ ನೇರ ಜವಾಬ್ದಾರರಾಗುತ್ತಾರೆ ಎಂದು ತಿಳಿಸಲಾಗುತ್ತದೆ.

ಇಂತಿ ತಮ್ಮ ವಿಶ್ವಾಸಿ

**(ಶಿವಾನಂದ ಕಾಪಶಿ, ಐ.ಎ.ಎಸ್)**

**ಕುಲಸಚಿವರು**

ಪ್ರತಿಗಳು:

1. ಆಪ್ತ ಸಹಾಯಕರು, ಉಪ ಕುಲಪತಿಗಳು/ಕುಲಸಚಿವರು, ರಾಗಾಆವಿವಿ, ಬೆಂಗಳೂರು.
2. ಸಿಸ್ಟಮ್ ಆನಾಲಿಸ್ಟ್, ರಾಗಾಆವಿವಿ,- ವಿಶ್ವವಿದ್ಯಾಲಯದ ವೆಬ್ ಸೈಟ್‌ನಲ್ಲಿ ಪ್ರಚುರಗೊಳಿಸಲು
3. ಸಂಬಂಧ ಪಟ್ಟ ಕಾಲೇಜುಗಳ ಕಡತಕ್ಕೆ
4. ಕಛೇರಿಯ ಪ್ರತಿ.